ದಿನಾಂಕಃ **27.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **1** ಮತ್ತು **11** ನೇ ಪರ ಶ್ರೀ. ಡಿ ವಿ ಎಸ್ ವಕೀಲರಿಂದಃ

ಪ್ರಸ್ತುತ ದಾವಾ ಸ್ವತ್ತಿನ ಖಾತೆ 1 ನೇ ವಾದಿಯ ಹೆಸರಿನಲ್ಲಿ ಇರುತ್ತದೆ. ಈ ದಾವೆಯನ್ನು ಹೂಡುವ ಕಾಲಕ್ಕೆ ದಾವಾ ಸ್ವತ್ತು ಭೂ ಪರಿವರ್ತನೆ ಆಗಿತ್ತು ಎಂದು ಸೂಚಿಸುವುದು ಸರಿಯಲ್ಲ. ನಿಪಿ 53 ನಕಾಶೆಯನ್ನು ಈ ದಾವೆಯನ್ನು ಹೂಡುವ ಪೂರ್ವದಲ್ಲಿ ತಯಾರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ರಾಮಕ್ಕ 1 ನೇ ಪ್ರತಿವಾದಿಗೆ ದಾವ ಸ್ವತ್ತಿಗೆ ಸಂಬಂದಿಸಿದಂತೆ ಜಿ ಪಿ ಎ ಬರೆದುಕೊಟ್ಟಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರಿಗೆ ಆರೋಗ್ಯ ಸರಿಯಿರಲಿಲ್ಲ, ಅವರನ್ನು ಕರೆದುಕೊಂಡು ಹೋಗಿ ಸಹಿ ಮಾಡಿಸಿಕೊಂಡಿರಬಹುದು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ರಾಮಕ್ಕ ಬರೆದುಕೊಟ್ಟ ಜಿ ಪಿ ಎ ಆಧಾರದ ಮೇರೆಗೆ 1 ನೇ ಪ್ರತಿವಾದಿ ದಾವ ಸ್ವತಿನಲ್ಲಿ ನಿವೇಶನಗಳನ್ನು ಮಾಡಿ ಇತರೆ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 1 ನೇ ಪ್ರತಿವಾದಿ ಬರೆದುಕೊಟ್ಟ ಕ್ರಯ ಪತ್ರಗಳ ಆಧಾರದ ಮೇರೆಗೆ ಖರೀದಿದಾರರ ಹೆಸರುಗಳಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನಲ್ಲಿ ನಿವೇಶನಗಳನ್ನು ಖರೀದಿ ಮಾಡಿದ ಪ್ರತಿವಾದಿಗಳು ಖರೀದಿ ಮಾಡಿದ ದಿನದಿಂದ ಸ್ವಾಧಿನದಲ್ಲಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ಯಾರು ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

2. 1 ನೇ ಪ್ರತಿವಾದಿ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಬರದುಕೊಟ್ಟ ಕ್ರಯ ಪತ್ರಗಳನ್ನು ಮತ್ತು ಖಾತೆ ವರ್ಗಾಗಣೆಯನ್ನು ಪ್ರಶ್ನಿಸಿ ಈ ದಾವೆಯನ್ನು ಹೊರತುಪಡಿಸಿ ನಾವು ಯಾವುದೇ ದಾವೆ ಹೂಡಿರುವುದಿಲ್ಲ. ನಾನು ರಾಮಕ್ಕ ರವರಿಗೆ ಸಂಬಂಧಿಸಿದಂತೆ ಹಾಜರುಪಡಿಸಿರುವ

ಎಲ್ಲಾ ಆಸ್ಪತ್ರೆಯ ದಾಖಲೆಗಳು 2001 ರ ನಂತರದ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರಸ್ತುತ ನಾವು ಸ್ವಾಧಿನದಲ್ಲಿರುತ್ತೇವೆ ಎಂಬುದಕ್ಕೆ ದಾಖಲೆ ಇರುತ್ತದೆ. ದಾವಾ ಸ್ವತ್ತು ನಿವೇಶನಗಳಾಗಿ ಬದಲಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

3. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಅಥವಾ ಸ್ವಾಧಿನ ಇಲ್ಲದೆ ಇದ್ದರೂ ಸಹ ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ